

ಕಲಿಸುವುದು ಅವನ ಉದ್ದೇಶವಾಗಿತ್ತು. ಆದರೆ, ಅವಳು ಕಲಿತು ಸಂಭಾಳಿಸುತ್ತಾಳೆನ್ನುವ ಯಾವ ಖಾತರಿಯೂ ಅವನಿಗಿದ್ದಂತಿರಲಿಲ್ಲ. ಹಾಗೆಂದು ಕಿರಿಯ ವೈದ್ಯರಾದ ನಮ್ಮನ್ನು ಅಣಕಿಸುವುದು ಮತ್ತು ಪರೋಕ್ಷವಾಗಿ ಕೆಣಕುವ ಅಗತ್ಯವಾದರೂ ಏನು? ಅನ್ನಿಸಿತು. ಜೊತೆಗೆ ವಯಸ್ಸಿನಲ್ಲಿ ಚಿಕ್ಕವರಾಗಿದ್ದ ನಮಗಿಲ್ಲದ ಹಣದಾಸೆ ಇವನಿಗ್ಯಾಕೆ? ಅನುಭವಿಸಲು ಬರದಿರುವುದು ಯಾವ ಸುಖಕ್ಕೆ? ಎನ್ನಿಸಿದರೂ ಆ ಬಗ್ಗೆ ತೀರ್ಮಾನದ ದೃಷ್ಟಿಕೋನ ಹೊಂದುವುದು ತಪ್ಪೆಂದು ನನಗೆ ಅರಿವಿತ್ತು.

ಅವಘಡಗಳು ಬದುಕಿನಲ್ಲಿ ಘಟಿಸಿಬಿಡುತ್ತವೆ. ಅದರಿಂದ ಕಲಿಯುವುದೂ ಇರುತ್ತದೆ. ಅದರಿಂದ ಕಲಿತು, ಮೇಲೇರಿದವರ ಮನಸ್ಸು ಎಲ್ಲರಿಗಿಂತ ಗಟ್ಟಿಯಿರುತ್ತದೆ. ಐಶಾರಾಮದಿಂದ ಬದುಕದಿದ್ದರೆ ಸುಖವಾಗಿಲ್ಲ ಅಂತೇನೂ ಇಲ್ಲವಲ್ಲ? ಜೀವನದಲ್ಲಿ ಆದ ದುರ್ಘಟನೆಗೆ ದುಃಖಿಸುತ್ತ ಕೂರದೆ, ತನ್ನ ಬುದ್ಧಿವಂತಿಕೆಯಿಂದಲೇ ಸಾಮ್ರಾಜ್ಯ ಕಟ್ಟುವುದೇನೂ ಕಡಿಮೆ ಸಾಧನೆಯಲ್ಲ. ಬದುಕಿನಲ್ಲಿ ಹಲವು ವಿಚಾರಗಳನ್ನು ಜಯಿಸಿದ ಅವನ ಬಗ್ಗೆ ಆ ಕ್ಷಣ ಅಭಿಮಾನ ಮೂಡಿತು. ಆದರೆ ತಾನು ಬಿದ್ದ ಹಳ್ಳದಿಂದ ಮೇಲೆದ್ದ ನಂತರ ಮಿಕ್ಕವರನ್ನು ಅದೇ ಹಳ್ಳದ ಕಡೆಗೆ ನಡೆಯಲು ಆಮಿಷ ತೋರಿಸಿ ಉತ್ತೇಜಿಸುವುದು ಮಾತ್ರ ತಪ್ಪೆನಿಸಿತು.

''ದೊಡ್ಡ ಸಾಧನೆ'' ಅಂತ ಮೇಲೆದ್ದು ನಿಂತು ಕೈ ಕುಲುಕಿದೆ. ಅವನಲ್ಲಿ ಗೊಂದಲ ಮೂಡಿತು. ನನ್ನದು ಬರಿಯ ಶ್ಲಾಘನೆಯೋ ಅಥವಾ 'ಮುಂದೆ ತಿಳಿಯಲು ಆಸಕ್ತಿಯಿಲ್ಲ, ಇನ್ನು ಹೊರಡಿ' ಎನ್ನುವ ಬಗೆಯ ವಿದಾಯವೋ ಎಂದು ತಿಳಿಯದೆ ಅವನಿಗೆ ಗೊಂದಲವಾಗಿರಬೇಕು.

ಮೇಲೆದ್ದು ನಿಂತವನು ಮತ್ತೆ ಕುಳಿತ.

''ನಿನಗೆ ಇದನ್ನು ಕೇಳ್ಬೇಕು ಅಂತ ಬಂದೆ. ನೀನು ವಾರದ ಬೇರೆ ದಿನಗಳಲ್ಲಿ ಇನ್ನೊಂದು ಆಸ್ಪತ್ರೆಗೆ ಹೋಗ್ತೀಯಲ್ಲ. ಅಲ್ಲಿ ಸಂತೋಷವಾಗಿದ್ದೀಯ?'' ಎಂದು ಬಹಳ ಕಾಳಜಿಯ ಧ್ವನಿಯಲ್ಲಿ ಕೇಳಿದ.

''ತೊಂದರೆಗಳೇನು ಇಲ್ಲ'' ಅಂತ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಹೇಳಿ, 'ಯಾಕೆ' ಎನ್ನುವಂತೆ ನೋಡಿದೆ.

''ನೋಡು... ನಿನ್ನ ಆ ಇನ್ನೊಂದು ಕೆಲಸಬಿಟ್ಟು ಇಲ್ಲಿಯೇ ಹೆಚ್ಚು ದಿನ ಕೆಲಸ ಮಾಡಬೇಕೆಂದಿದ್ದರೆ, ಸಂಕೋಚವಿಲ್ಲದೆ ತಿಳಿಸು. ನಮ್ಮದೇ ಇನ್ನೊಂದು ಆಸ್ಪತ್ರೆಯ ರೋಗಿಗಳನ್ನು ನೋಡಿಬರಲು ಎಲ್ಲ ವ್ಯವಸ್ಥೆ ಮಾಡುತ್ತೇನೆ. ಹಣ ಮಾಡುವ ಎಲ್ಲ ತಂತ್ರಗಳನ್ನು ಒನ್–ಟು–ಒನ್ ಹೇಳಿಕೊಡುತ್ತೇನೆ'' ಅಂದ.

ಅವನು ನನ್ನನ್ನು ಮತ್ತಷ್ಟು 'ಹೂಡಿಕೆ' ಮಾಡಲು ಬಂದಿದ್ದ. ನಾನೀಗ ಚಲಾವಣೆಯಲ್ಲಿದ್ದ ನಾಣ್ಯವಾಗಿದ್ದೆ. ಮತ್ತೊಂದು ಆಸ್ಪತ್ರೆಯ ವೈದ್ಯ ಕೆಲಸ ಬಿಟ್ಟಿರಬಹುದು, ನಿವೃತ್ತನಾಗಿರಬಹುದು. ಅದಕ್ಕೇ ಅವನಿಗೆ ಥಟ್ಟನೆ ನನ್ನ ನೆನಪಾಗಿತ್ತು. ಅವನ ಸಮಯ ಹಣವಲ್ಲವೇ?

ಇಂತಿಷ್ಟೇ ಕೆಲಸ ತೆಗೆಯಬೇಕೆನ್ನುವ ಯಾವುದೇ ಒತ್ತಡ ನನ್ನ ಇನ್ನಿತರ ಮೂರು ದಿನಗಳ ಕೆಲಸದಲ್ಲಿರಲಿಲ್ಲ. ಮೂರು ದಿನಕ್ಕಿಂತ ಹೆಚ್ಚಿನ ಕೆಲಸ ಅಲ್ಲಿರಲಿಲ್ಲ ಎಂಬ ಕಾರಣಕ್ಕೆ ಮಾತ್ರ ನಾನು ಈತನ ಕಾರ್ಪೊರೇಟಿನಲ್ಲಿ ಇನ್ನೆರಡು ದಿನ ಕೆಲಸ ಮಾಡುತ್ತಿದ್ದೆ.

''ಖಂಡಿತವಾಗಿ ಹೇಳ್ತೇನೆ'' ಎಂದು ತಡವೇ ಇಲ್ಲದೆ ಉತ್ತರಿಸಿದೆ.

''ಕಾಯುತ್ತಿರುತ್ತೇನೆ'' ಎಂದು ಕಣ್ಣು ಹೊಡೆದು ಹೊರಟ ಅವನಿಗೆ ನನ್ನ ಅಭಿಪ್ರಾಯವೇನೆಂದು ತಿಳಿದಿತ್ತು. ನಾನು ಅವನಿಗೆ ಉತ್ತರ ಕಳಿಸುವ ಗೋಜಿಗೆ ಹೋಗಲಿಲ್ಲ.